ಅತ್ಯಂತ ಪ್ರಿಯವಾದ ವಸ್ತು ಅವಳು...' ಬಿಕ್ಕಿದ. 'ಬಿಟ್ಟುಕೊಡೋದೇ ಇಟ್ಟುಕೊಳ್ಳೋ ಸರಳೋಪಾಯ ಅಂತ ಸುಮ್ಮನಾಗಿದೀನಿ, ಸಿದ್ಧ್...' ಎನ್ನುವಾಗ ಕಣ್ಣಲ್ಲಿ ಕಂಡಾಪಟ್ಟೆ ನೀರು ತುಂಬಿಕೊಂಡ.

ಪಾ–ನ ಬವಣೆಯೇನಂತ ನನಗೆ ಚೆನ್ನಾಗಿ ಅರ್ಥವಾಯಿತು. ವರ್ಷದಿಂದೀಚೆಗಷ್ಟೇ ಮನಸೋತು, ಮೈಸೋತು ಒಪ್ಪಿ, ಒಪ್ಪಿಸಿಕೊಂಡ ತನ್ವಿಯನ್ನು ನಾನು ತಾನೇ ಹೇಗೆ ಹಿಂಬಿಟ್ಟು ವಾಪಸು ಬರಬಲ್ಲೆನಿದ್ದೆ? ಹಾಗೆ ಬಿಟ್ಟಿದ್ದಿದ್ದಲ್ಲಿ ಅವಳು ನನ್ನಿಡೀ ಬದುಕಿನ ದೌರ್ಬಲ್ಯವೂ, ವೈಫಲ್ಯವೂ ಆಗಿರುತ್ತಿದ್ದಳಷ್ಟೆ? ಪ್ರೀತಿಯೆಂಬುದರ ಇತ್ತೀಚಿನ ಸಾಮೀಪ್ಯ ಸಾನ್ನಿಧ್ಯದಲ್ಲೇ ನಾನು ಹೀಗಾಗಿರುವಾಗ, ಸರಿಸುಮಾರು ಮೂವತ್ತು ಕಾಲದ ಇವರಿಬ್ಬರ ಸಾಂಗತ್ಯದಲ್ಲೇನಾಗಬಹುದು?

ದಿವಸ್ ಪ್ರಾಫ್ ಅಂತೆಂಬ ಉತ್ತರ ಕರ್ನಾಟಕದ ಮಾಧ್ವ ಹಿನ್ನೆಲೆಯ ನನ್ನ ಪಾ–ಪೂರ್ಣೇಂದು ಮಂಜ್ರೇಕರ್ ಅಂತೆಂಬ ಕಟು ಮರಾಠಿ ದೇಶಸ್ಥ ಕನ್ನೆಗೆ ಮೂವತ್ತನಾಲ್ಕು ವರ್ಷಗಳ ಹಿಂದೆ, ಇಬ್ಬರೂ ಓದುತ್ತಿದ್ದ ಪುಣೆಯ ಡಿಸೈನುಶಾಲೆಯಲ್ಲಿ ಒಲಿದು ಮಾರುಹೋಗಿದ್ದು –ದೊಡ್ಡ ರಖಮಿನ ಹಿಂದೀ ಸಿನಿಮಾದ ಕಥೆಯಾಗಬಲ್ಲದೆಂದು, ಇಬ್ಬರ ಸಹವರ್ತಿಗಳು ಆಡಿಕೊಳ್ಳುತ್ತಿದ್ದುದನ್ನು ನಾನು ಚಿಕ್ಕಂದಿನಿಂದ ಕಿವಿಯಾರೆ ಕೇಳಪಟ್ಟಿದ್ದೇನೆ. ಸದರಿ ಕಥಾನಕದ ಒಳಸುಳಿಗಳಾಗಲಿ ಅಂತರ್ವಿವರಗಳಾಗಲಿ, ನನಗೆ ತೀರಾ ಗೊತ್ತಿರದಿದ್ದರೂ, ಇಬ್ಬರ ನೆಪದಲ್ಲಿ ಆವಿರ್ಭವಿಸಿದ ಮಗನೊಬ್ಬನಿಗೆ ತಿಳಿದಿರಬೇಕಾದ ಪ್ರೀತ್ಯರ್ಥ ಸೂಕ್ಷ್ಮಗಳಂತೂ ಗೊತ್ತೇ ಇವೆ. ಭಾರೀ ಬುದ್ಧಿಮತ್ತೆಯ ಆಸಾಮಿಯಾದ ನನ್ನ ಪಾ–ನಿಗೆ ಆರ್ಕಿಟೆಕ್ಚರೋದಬೇಕೆಂಬ ಇರಾದೆಯೇನೂ ಮೊದಲಿನಿಂದ ಇದ್ದಿರಲಿಲ್ಲವಂತೆ. ಚಿತ್ರ ಬಿಡಿಸುವುದರಲ್ಲಿ ಅವನಿಗೆ ವಿಪರೀತ ಆಸ್ಥೆಯಿದ್ದಿತು ಅಷ್ಟೆ. ಸಚಿತ್ರ ಓದೆನ್ನುವ ಸಲುವಾಗಿಯಷ್ಟೇ ಮೊದಲು ಮೆಡಿಕಲಿನಲ್ಲಿ ದಾಖಲಾದನಂತೆ. ಹೆಣ ಬಗೆದು, ಅಂಗಾಗ ಕೊಯ್ದುದಾಖಲಿಸುವ ಮೆಡಿಕಲೋದು ಅವನಲ್ಲಿ ವಿಶೇಷ ಆಸಕ್ತಿಯನ್ನೇನೂ ಕೆರಳಿಸಲಿಲ್ಲ. ಹೀಗಿರುವಾಗಲೊಮ್ಮೆ, ಡ್ರಾಇಂಗು ಮಾಡುವುದೇ ಧ್ಯೇಯೋದ್ದೇಶವಿದ್ದಿದ್ದಲ್ಲಿ ನೀನು ಆರ್ಕಿಟೆಕ್ಟಾಗಬೇಕಿತ್ತೆಂದು ಅವನ ಫಿಸಿಯಾಲಜಿ ಪ್ರೊಫೆಸರು ಹೇಳಿ, ಆ ಕೂಡಲೆ, ಆರ್ಕಿಟೆಕ್ಚರಿಗೆ ಎಂಟ್ರೆನ್ಸು ಬರೆದು ಪುಣೆ ಸೇರಿದನಂತೆ. ಇಷ್ಟೆಲ್ಲ ಆಗಿದ್ದು ತನ್ನ ಸಲುವಾಗಿಯೇ ಎಂದು ಮಾ ಆಗಾಗ ಹೇಳಿ, ಹೆಮ್ಮೆ ಬೀಗುತ್ತಿದ್ದುದು ನನಗಿನ್ನೂ ನೆನಪಿನಲ್ಲಿದೆ. ಇಬ್ಬರೂ ಪರಸ್ಪರ ಮೋಹಕ್ಕೀಡಾಗಿ ಎಲ್ಲೆಂದರಲ್ಲಿ ಪ್ರಣಯೋನ್ಮಾದಗೊಂಡು ಕಳೆಯುತ್ತಿದ್ದುದು ಅವರಿದ್ದ ಇಡೀ ಡಿಸೈನುಶಾಲೆಯಲ್ಲಿ ಗುಲ್ಲಾಗಿದ್ದಿತಂತೆ. ಒಮ್ಮೆ ಇಬ್ಬರ ಸಹಪಾಠಿಯೊಬ್ಬ, 'ಯೇ ಕ್ಯಾ ಲಗತೀ ಹೇ, ತೇರಿ?' ಎಂದು ಮಾ–ಳ ಮೇಲೆ ಕೈಮಾಡಿ ಛೇಡಿಸಿ ಚುಡಾಯಿಸುವಾಗ, ಪಾ, ಎಲ್ಲರೆದುರೇ ಅವಳನ್ನು ಬಿಗಿದಪ್ಪಿಕೊಂಡು ಮುದ್ದಿಸಿದ್ದು, ಇಡೀ ಪುಣೆಶಹರಿಯಲ್ಲಿ 'ಟಾಕಾಫ್ ದಿ ಟೌನ್' ಆಗಿತ್ತೆಂದು ಅವರಿವರು ಈಗ್ಲೂ ಆಡಿಕೊಳ್ಳುತ್ತಾರೆ! ಇವುಗಳನ್ನೆಲ್ಲ ನೋಡಿದರೆ, ಯಾರಿಗೂ ಇದು ಸಿನಿಮಾಕತೆಯೆಂತಲೇ ಅನ್ನಿಸಬಹುದು. ಇಷ್ಟಕ್ಕು, ಇಂತಹ ಪ್ರೇಮಕಥೆಗಳು ಪ್ರೀತಿನಿರತರ ಸುಖಾಂತದಾಚೆಗಿನ ಜಂಟಿಬದುಕನ್ನು ಸಂಪೂರ್ಣವಾಗಿಹಿಡಿಯುವುದಿಲ್ಲ. ಇದಕ್ಕೂ ವಿಚಿತ್ರವೆಂದರೆ– ಬವಣೆ, ಕಾರ್ಪಣ್ಯ, ಗಂಡಾಗುಂಡಿ, ಸಂದಿಗ್ಧ, ಜಿಜ್ಞಾಸೆಗಳಿರುವ ಸಾಂಸಾರಿಕತೆಯನ್ನು ಯಾರೂ ಆಸ್ವಾದಿಸರು ಕೂಡ!

'ಏನೋ ಡಿವೋರ್ಸ್ ಅಂತಂದೆಯಲ್ಲ, ಪಾ?' ಕುತೂಹಲ ಮಿಗಿಸಿಕೊಂಡು ಕೇಳಿದೆ. ರೆಸ್ತುರಾದಂತಹ ಪಬ್ಲಿಕಾವರಣದಲ್ಲಿ ಅಳು ಮುಂದಿರಿಸಿಕೊಂಡು ಆಡುತ್ತಿರುವ ನನ್ನ ಅಪ್ಪನಾದ